ಈ) ಪರ್ಯಾಯ ನೇಮಕಾತಿಗಾಗಿ ಸೂಕ್ತ ಅಭ್ಯರ್ಥಿ ಸಿಕ್ಕ ಕೂಡಲೇ ಇವರ ಸೇವೆಯನ್ನು ಮುಕ್ತಾಯಗೊಳಿಸಲಾಗುವುದು.

ವಿಷಯ: ಬೆಂಗಳೂರು ನಗರದ ಹೊರವಲಯದ ನಗರ ಸಭೆಗಳನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸೇರಿಸದಿರುವ ಬಗ್ಗೆ

2571 (3905)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹೊರ ವಲಯದ ಬೊಮ್ಮನಹಳ್ಳಿ ಮಹದೇವಪುರ, ಪಟ್ಟಣಗೆರೆ ದಾಸರಹಳ್ಳಿ, ಕೃಷ್ಣರಾಜಪುರ, ಬ್ಯಾಟರಾಯನಪುರ, ಯಲಹಂಕ ನಗರಸಭೆಗಳು ಪೌರಾಡಳಿತ ನಿರ್ದೇಶನಾಲಯಕ್ಕೆ ಒಳಪಟ್ಟಿರುವುದೇ;

ಆ) ಒಳಪಟ್ಟಿರದಿದ್ದಲ್ಲಿ ಕಾರಣಗಳೇನು (ವಿವರ ನೀಡುವುದು)

ಇ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದಲ್ಲಿ ಯಾವಾಗ ಮೇಲ್ಕಂಡ ಏಳು ನಗರಸಭೆಗಳನ್ನು ಪೌರಾಡಳಿತ ನಿರ್ದೇಶಕರ ಸಾಮ್ಯಕ್ಕೆ ಒಳಪಡಿಸಲಾಗುವುದು? (ವಿವರ ನೀಡುವುದು).

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ.

ಆ) ಬೆಂಗಳೂರು ಮಹಾನಗರದ ಅಂಚಿನಲ್ಲಿರುವ ಏಳು ನಗರಸಭೆಯ ಸ್ಥಳೀಯ ಸಂಸ್ಥೆಗಳು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಇ) ಉದ್ಭವಿಸುವುದಿಲ್ಲ.

ವಿಷಯ: ಚಿನ್ನಪ್ಪರೆಡ್ಡಿ ಆಯೋಗದ ಮೀಸಲಾತಿ ಕುರಿತು.

2572 (3904)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿನ್ನಪ್ಪರೆಡ್ಡಿ ಆಯೋಗದ ಮೀಸಲಾತಿ ವರದಿಯನ್ನು ಜಾರಿಗೊಳಿಸುವ

ಮೊದಲು ರಾಜ್ಯದಲ್ಲಿ ಯಾವ ಆಧಾರದ ಮೇಲೆ ಮೀಸಲಾತಿ ಸೌಲಭ್ಯಗಳನ್ನು ನೀಡಲಾಗಿತ್ತು.

ಆ) ಸದರಿ ಮೀಸಲಾತಿ ನೆಲೆಯಲ್ಲಿ ಆಯಾ ವರ್ಗದ ಅಡಿಯಲ್ಲಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿ ಉದ್ಯೋಗ ಪಡೆದಿರುವಂತಹ ಅಭ್ಯರ್ಥಿಗಳ ಆದಾಯ ಪ್ರಮಾಣ ಪತ್ರವನ್ನು ಪರಿಷ್ಕರಿಸುವ ಅಧಿಕಾರ ಯಾರಿಗೆ ನೀಡಲಾಗಿತ್ತು.

ಇ) ಸದರಿ ಆದಾಯ ಪ್ರಮಾಣ ಪತ್ರವನ್ನು ಪರಿಷ್ಕರಿಸುವ ಅಧಿಕಾರಿಗಳು, ಉದ್ಯೋಗ ಪಡೆದಿರುವಂತಹ ಅಭ್ಯರ್ಥಿಗಳ ಸತ್ಯಶೋಧನಾ ಪ್ರಮಾಣ ಪತ್ರವನ್ನು ಸರಿಯಾಗಿ ಪರಿಶೀಲಿಸದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಅನೂರ್ಜಿತಗೊಳಿಸಿದಲ್ಲಿ ಇಂತಹ ಅಭ್ಯರ್ಥಿಗಳು ಮೇಲ್ಮನವಿಯನ್ನು ಯಾರಿಗೆ, ಯಾವ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದೆ; (ವಿವರ ನೀಡುವುದು)

ಈ) ವಿವಿಧ ಇಲಾಖೆಗಳಲ್ಲಿ ಹಿಂದಿನ ಮೀಸಲಾತಿಯಂತೆ ನೇಮಕಗೊಂಡ ಅಭ್ಯರ್ಥಿಗಳಿಗೆ ಈಗಿನ ಮೀಸಲಾತಿ ನಿಯಮಗಳಂತೆ ಮೇಲ್ಮನವಿ ಸಲ್ಲಿಸುವ ಅವಕಾಶ ಕಲ್ಪಿಸಬಹುದೇ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಹಿಂದುಳಿದ ಸಮುದಾಯಗಳು, ಜಾತಿಗಳು ಮತ್ತು ಬುಡಕಟ್ಟುಗಳ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಗೆ ಸಂಬಂಧಪಟ್ಟಂತೆ ಲಭ್ಯವಾಗಬಹುದಾದ ಎಲ್ಲಾ ಮಾಹಿತಿಗಳನ್ನು ಗಣನೆಗೆ ತೆಗೆದುಕೊಂಡು ಪ್ರತಿಯೊಂದು ಸಮುದಾಯದ ಬಡವರ್ಗ ಅವರ ಜೀವನ ಮಟ್ಟ, ಹವ್ಯಾಸಗಳು ಮತ್ತು ಪದ್ಧತಿಗಳು ಸಾಮಾಜಿಕ ಅನುಕ್ರಮ ಮಟ್ಟದಲ್ಲಿನ ಪ್ರತಿಯೊಂದು ಸಮುದಾಯದ ಸ್ಥಾನಮಾನವನ್ನು ಪರಿಶೀಲಿಸಿ ಸರ್ಕಾರಿ ಆದೇಶ ಸಂಖ್ಯೆ ಸಕಕಾ 66 ಬಿಸಿಎ 86, ದಿನಾಂಕ: 13-10-86ರ ಮೀಸಲಾತಿ ಆದೇಶವನ್ನು ಹೊರಡಿಸಿದೆ.

ಆ) ಕರ್ನಾಟಕ ಅನುಸೂಚಿತ ಜಾತಿಗಳು: ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ನಿಯಮಗಳು, 1992 ಜಾರಿಗೆ ಬಂದನಂತರ ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳನ್ನು ಸಂಬಂಧಿಸಿದ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಪರಿಶೀಲಿಸಿ ಸಿಂಧುತ್ವ ಪ್ರಮಾಣ ಪತ್ರ ನೀಡುತ್ತಿದ್ದು ಈ ಪದ್ಧತಿಯು ಹಿಂದೆ ಜಾರಿಯಲ್ಲಿ ಇರಲಿಲ್ಲ.

ಇ) ಕರ್ನಾಟಕ ಅನುಸೂಚಿತ ಜಾತಿಗಳು: ಅನುಸೂಚಿತ ಬುಡಕಟ್ಟುಗಳು ಮತ್ತು

ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ನಿಯಮಗಳು 1992ರನ್ವಯ ಸಂಬಂಧಿಸಿದ ವಿಭಾಗಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೇಲ್ಮನವಿಗಳನ್ನು ಸಂಬಂಧಿಸಿದ ವಿಭಾಗಾಧಿಕಾರಿಗಳಿಗೆ ಸಲ್ಲಿಸಬಹುದು.

ಈ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲುಗಣಿಗಾರಿಕೆ ಪರವಾನಿಗೆ ಕುರಿತು.

2573 (3902)

ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ಎಷ್ಟು ಜನರಿಗೆ ಯಾವ ಯಾವ ಸ್ಥಳಗಳಲ್ಲಿ ಎಷ್ಟು ವರ್ಷಕ್ಕೆ ಕಲ್ಲು ಗಣಿಗಾರಿಕೆಗೆ ಪರವಾನಿಗೆ ನೀಡಲಾಗಿದೆ? (ಖಾಸಗಿ ಮತ್ತು ಸರ್ಕಾರಿ ಸ್ಥಳಗಳ ಪರವಾನಿಗೆ ವಿವರ ನೀಡುವುದು)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲು ಗಣಿಗಾರಿಕೆಗೆ ಪರವಾನಿಗೆ ಕೋರಿ ಎಷ್ಟು ಜನರು ಅರ್ಜಿ ಸಲ್ಲಿಸಿರುತ್ತಾರೆ, ಎಷ್ಟು ಸಮಯದಿಂದ ಅರ್ಜಿಗಳು ವಿಲೇವಾರಿ ಆಗದೇ ಉಳಿದಿರುತ್ತದೆ? (ತಾಲ್ಲೂಕುವಾರು ಮತ್ತು ಸ್ಥಳವಾರು ಪೂರ್ಣ ವಿವರ ನೀಡುವುದು)

ಶ್ರೀ ಎಸ್.ಡಿ.ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1162 ಜನರಿಗೆ ಐದು ವರ್ಷದ ಅವಧಿಗೆ (ಮಂಜೂರಾದ ದಿನಾಂಕದಿಂದ) ಗುತ್ತಿಗೆಯನ್ನು ನೀಡಲಾಗಿದೆ ಅದರ ವಿವರ ಈ ಕೆಳಕಂಡಂತೆ ಇವೆ.

ತಾಲ್ಲೂಕು	ಕಟ್ಟಡ ಕಲ್ಲು ಗುತ್ತಿಗೆ ಸಂಖ್ಯೆ	ಮುರಕಲ್ಲು ಗುತ್ತಿಗೆ ಸಂ.	ಸಾಮಾನ್ಯ ಮರಳು ಗುತ್ತಿಗೆ ಸಂ	ಜೇಡಿ ಮಣ್ಣು ಗುತ್ತಿಗೆ ಸಂ.
ಬೆಳ್ತಂಗಡಿ	44	9	11	-
ಮತ್ತೂರು	9	34	5	-
ಸುಳ್ಯ	24	34	4	-